# ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಮೊಬೈಲ್ ಸಂಖ್ಯೆ: 9448359004
ಈ-ಮೇಲ್: misgescom@gmail.com

ನಿಗಮ ಕಛೇರಿ, ಸ್ಟೇಷನ್ ರಸ್ತೆ
ಕಲಬುರಗಿ - 585102

ಸಂ: ಗುವಿಸಕಂನಿ/ಮುಇಂ(ಕಾ)/ಅಇಂ(MIS)/ಸಕಾನಿಇಂ-2/2020-21/ 4973-42 ದಿನಾಂಕ: 20 FEB 2021

ಉಪ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಕಲಬುರಗಿ.

ಹಿರಿಯ ಸಹಾಯಕ ನಿರ್ದೇಶಕರು / ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಬಳ್ಳಾರಿ/ಯಾದಗಿರ್/ರಾಯಚೂರ್/ಕೊಪ್ಪಳ/ ಬೀದರ್

ಮಾನ್ಯರೆ,

ವಿಷಯ :- ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಆರ್ಥಿಕ ವರ್ಷ-22 ರ ವಾರ್ಷಿಕ ವಿದ್ಯುತ್ ದರ ಪರಿಷ್ಕರಣೆಗಾಗಿ ಸಲ್ಲಿಸಿರುವ ಅರ್ಜಿಯ ಸಾರ್ವಜನಿಕ ವಿಚಾರಣೆ ಕುರಿತು.

ಉಲ್ಲೇಖ :- ಪತ್ರ ಸಂಖ್ಯೆ ಕಾರ್ಯದರ್ಶಿ KERC/B/01/21/1317 ದಿನಾಂಕ 19.01.2021 ಕೆಇಆರ್‌ಸಿ, ಬೆಂಗಳೂರು.

********

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು (ಜೆಸ್ಕಾಂ) ಆರ್ಥಿಕ ವರ್ಷ 2021-22 ನೇ ಸಾಲಿನ ವಿದ್ಯುತ್ ದರ ಪರಿಷ್ಕರಣೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದೆ ಅರ್ಜಿ ಸಲ್ಲಿಸಿದೆ. ಈ ಸಂಬAಧ ಸಾರ್ವಜನಿಕ ಅಭಿಪ್ರಾಯವನ್ನು ಮಾನ್ಯ ಆಯೋಗವು ಸಂಗ್ರಹಣೆ ಮಾಡಲಿದೆ.

ವಿದ್ಯುತ್ ದರ ಪರಿಷ್ಕರಣೆ ಹಿನ್ನಲೆಯಲ್ಲಿ ಸಾರ್ವಜನಿಕರಿಂದ ಅಹವಾಲುಗಳು/ಅಭಿಪ್ರಾಯಗಳು ಸಂಗ್ರಹಿಸಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) 25 ಗುರುವಾರ 2021 ರಂದು ಬೆಳಿಗ್ಗೆ 11.00 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣ / ಕೋರ್ಟ್ ಹಾಲ್ ಸಾರ್ವಜನಿಕರ ಅಹವಾಲುಗಳ ವಿಚಾರಣೆ ಹಾಗೂ ಅಭಿಪ್ರಾಯ ಸಂಗ್ರಹಿಸಲಿದೆ. ಆಸಕ್ತ ವ್ಯಕ್ತಿಗಳು, ಸಂಘ ಸಂಸ್ಥೆಗಳು ಮತ್ತು ಇತರ ಸಾರ್ವಜನಿಕರು ಈ ಸಭೆಗೆ ಆಗಮಿಸಿ ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಆಯೋಗದ ಮುಂದೆ ಮಂಡಿಸಬಹುದಾಗಿದೆ.

ಆದುದರಿಂದ ಮೇಲ್ಕಂಡ ದಿನಾಂಕದಂದು ಜರುಗುವ ಸಾರ್ವಜನಿಕರ ಅಹವಾಲುಗಳ ವಿಚಾರಣೆ ಕಾರ್ಯಕ್ರಮದ ಬಗ್ಗೆ ದಿನಾಂಕ 21.02.2021 ರಿಂದ 25.02.2021 ರವರೆಗೆ ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ, ವಿದ್ಯುನ್ಮಾದ ಮಾಧ್ಯಮ ಹಾಗೂ ರೇಡಿಯೋ ಮೂಲಕ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ತಲುಪುವಂತೆ ಸುದ್ದಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ತಮ್ಮಲ್ಲಿ ವಿನಂತಿಸಲಾಗಿದೆ.

ತಮ್ಮ ವಿಶ್ವಾಸಿ,

20/2/2021

ಮುಖ್ಯ ಅಭಿಯಂತರರು (ಕಾರ್ಯಚರಣೆ),
ನಿಗಮ ಕಚೇರಿ, ಗುವಿಸಕಂನಿ, ಕಲಬುರಗಿ

ಪ್ರತಿಗಳು:

1. ಕಾರ್ಯನಿರ್ವಾಹಕ ಅಭಿಯಂತರರು (ನಿವ್ಯ) ನಿಗಮ ಕಚೇರಿ, ಗುವಿಸಕಂನಿ, ಕಲಬುರಗಿ
2. ಮಾನ್ಯ ವ್ಯವಸ್ಥಾಪಕ ನಿದೇರ್ಶಕರು/ನಿರ್ದೇಶಕರು(ತಾಂತ್ರಿಕ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು ರವರ ಮಾಹಿತಿಗಾಗಿ ಹಾಗೂ ವಿಷಯವನ್ನು ಮಾನ್ಯ. ವ್ಯವಸ್ಥಾಪಕ ನಿದೇರ್ಶಕರು/ನಿರ್ದೇಶಕರು(ತಾಂತ್ರಿಕ)ರವರ ಗಮನಕ್ಕೆ ತರಲು ಕೋರಲಾಗಿದೆ.